doc-45
T.P-2

Regd No M 1229 | 43rd Year | Sri 'Satyavadi' Mysore . 2—5—1...5

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅರಮನೆ ಸಿಂಸ್ಕೇದಾರ್ ಎಂ. ಎ ಸುಬ್ಬರಾಯುರು [ಬಿಡಿ ಪ್ರತಿ 3ಪೈ.

Protectthe cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಪೋಲೀಸರಿಗೆ ಉಗ್ರ ದಂಡನೆ

ಮೆದ್ರಾಸು 1 — ಪೋಲೀಸ ಠಾಣೆಯಲ್ಲಿ ಸತ್ಯ ಆರ್ಮುಗಂ ಮೊಕದ್ದಮೆ ಸಂಬಂಧದಲ್ಲಿ ಓರ್ವ ಪೋಲೀಸು ಅಧಿಕಾರಿ ಮತ್ತು ಮೂವರು ಕಾರ್ಕ್ಸ್ಟೆಬಲುಗಳಿಗೆ 2 ವರ್ಷಗಳ ಕಠಿಣ ಸಜೆವಾಯಿತು ಇದರೊಡನೆ ಮತ್ತಾರು ತಿಂಗಳು ಸಜೆಕೊಳ್ಳಗಾದ ಅವರೆಂದರೆ ಸಬ್ ಇನ್ಸ್ಪೆಕ್ಟರ್ ರಂಜಾಂಗಂ, ಕಾರ್ಕ್ಸ್ಟೆಬಲುಗಳಾದ ಸುಬ್ರಹ್ಮಣ್ಯಂ ಜಗನ್ನಾಥ ಮತ್ತು ನಟ್ಟರಾಜ್

ಪಾಕಿಸ್ತಾನಿಗೆ ದಂಡ

ಬೊಂಬಾಯಿ 1 — ಭಾರತ ಕರೆನ್ಸಿಯನ್ನು ಅಕ್ರಮ ಸಾಗಾಣಿಕೆ ಮಾಡಲು ಪ್ರಯತ್ನಿಸಿದ ಪಾಕಿಸ್ತಾನದ ವಿವಾಹ ಉದ್ಯೋಗಿ ಶ್ರೀಮತಿ ಖಯಿರುನ್ನೀಸಾಗೆ ರೂ 6 ಸಾವಿರ ದಂಡ ಇಲ್ಲವೆ 6 ತಿಂಗಳ ಸಾದಾ ಸಜೆ ಆಯಿತು

7 ಮಂದಿಯ ಸಾವು

ಒರೋಡ 1 — ಇಟ್ಟಿಗೆ 8 ಮೈಲಿಗಳ ದೂರವಿರುವ ದಾತಂತವಲ್ಲಿ ಬಸ್ ಪಲ್ಟಿಯಾಯಿ ಕಾರಣ 7 ಜನರು ಭಾರಿಗಳಿದವರು ಮರಣ ಹೊಂದಿದರು

ಸಮ ವೇತನ

ನವ ದೆಹಲಿ 1 — ಮಹಿಳೆಯರಿಗೆ ಸಮ ವೇತನ ಕೊಡಬೇಕೆಂದು ಕಮ್ಯೂನಿಸ್ಟ್ ಸದಸ್ಯೆ ಶ್ರೀಮತಿ ರೇಣು ಚಕ್ರವರ್ತಿಯವರು ಮಸೂದೆ ತರುವ ಸೂಚನೆಯು ಚರ್ಚೆ ಪೂರ್ಣವಾಗಿಲ್ಲ

ತೀವ್ರ ವಿರೋಧ

ಹುಬ್ಬಳ್ಳಿ ಏ 30 — ಸ್ವೆತ್ತಿನ ಮೇಲೆ ತಂಗೆ ಮಂಡಿವಿಮರ್ಶೆ ಆಗಿರುವ ಕುರಿತು ಪೌರು ತೀವ್ರ ಪ್ರತಿಭಟಿಸುತ್ತಿರುವರು

ಪರಿಹಾರ ಕೊಡಲು ನಿರಾಕರಣೆ

ಕರಾಚಿ 1 — ಭಾರತದ ಜೆಟ್ ವಿಮಾನ ಕ್ಯಾಸ್ಟೆರಾವನ್ನು ಪಾಕಿಸ್ತಾನ ಹೊಡೆದುರುಳಿಸಿದ ಬಗ್ಗೆ ಭಾರತ ಸರ್ಕಾರ ತೀವ್ರ ಪ್ರತಿಭಟಿಸಿ ಪರಿಹಾರ ಕೇಳಿದೆ ಪ್ರತಿಭಟನೆ ಮತ್ತು ಪರಿಹಾರ ಬೇಡಿಕೆ ನಿರಾಕರಿಸಲು ಪಾಕಿಸ್ತಾನ ಸರ್ಕಾರ ನಿರ್ಧರಿಸಿದೆಯೆಂದು ಗೊತ್ತಾಗಿದೆ

ಪರಿಶೀಲನೆ

ನವ ದೆಹಲಿ 1 — ಟಿಬೆಟ್ ಪ್ರಶ್ನೆ ಅದರೊಡನೆ ಭಾರತ-ಚೀನ ಪ್ರಶ್ನೆಯ ಪರಿಶೀಲನೆಯನ್ನು ಈ ತಿಂಗಳು 5 ನೆಯ ತಾ|| ನಿಂದ 8 ನೆಯ ತಾ|| ವರಿಗೆ ಸಮಾವೇಶವಾಗುವ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಪರಿಶೀಲನೆ ಮಾಡುವದೆಂದು ಗೊತ್ತಾಗಿದೆ

ಕಲಹ ಬಿಡಿ

ಪಾಟ್ನಾ 1 — ಸಣ್ಣಪುಟ್ಟ ಕಲಹಗಳನ್ನು ಕೊನೆ ಮಾಡುವಂತೆ ಪಂ|| ನೆಹರು ಬಹಿರಂಗ ಸಭೆಯಲ್ಲಿ ತಿಳಿಸಿದರು

ಅವಕಾಶ ಸಿಗಲಿಲ್ಲ

ನವ ದೆಹಲಿ 1 — ಮೂರು ಮಕ್ಕಳು ಏಳಾರ ಆದವರಿಗೆ ದಂಡ ವಿಧಿಸುವ ಮಸೂದೆಯನ್ನು ಕಾಂಗ್ರೆಸು ಸದಸ್ಯರು ಕಂದಿದ್ದು 80—39 ಮತಗಳಿಂದ ಅವಕಾಶ ಸಿಗಲಿಲ್ಲ.

ಎರ್ನಾಕುಲಂ 1 — ಕೇರಳದಲ್ಲಿ ಸಾಮೂಹಿಕ ಸಂಪರ್ಕ ಪಡೆಯುವಂತೆ ಶ್ರೀಮತಿ ಇಂದಿರಾ ಗಾಂಧಿ ಕೇರಳದ ಕಾಂಗ್ರೆಸಿಗರಿಗೆ ತಿಳಿಸಿದರು.

ಹುಬ್ಬಳ್ಳಿ 1 — ಅಖಿಲ ಭಾರತ ಅಂಬರ ನೂಲುವ ಸ್ಪರ್ಧೆಯಲ್ಲಿ ಮೈಸೂರಿಗೆ 3 ಬಹುಮಾನಗಳು ಸಿಕ್ಕಿವೆ

ದಲಾಯಿ ಲಾಮಾ ವಾಪಸಾದರೆ ಸರ್ವರಿಗೂ ಒಳ್ಳೆಯದು

ಖಟಮಂಡು 1 — ಕೋಸಿ ನದಿ ದಡದ ಮೇಲೆ ನಿನ್ನೆ ಪ್ರಧಾನಿ ನೆಹರು ನೇಪಾಳಿ ಪತ್ರಿಕೆಯವರಿಗೆ ಭೇಟಿಯನ್ನಿತ್ತು, ಅವರೊಡನೆ ಮಾತನಾಡುತ್ತಾ, ದಲಾಯಿ ಲಾಮಾರವರು ನಿಜವಾಗಿ ಲಾಸಾಕ್ಕೆ ವಾಪಸಾಗಬಲ್ಲರಾದರೆ ಸರ್ವರಿಗೂ ಒಳ್ಳೆಯದು ಎಂದರು ದಲಾಯಿ ಲಾಮಾ ಟಿಬೆಟ್ಟಿಗೆ ಒರುವಂತೆ ಚೀನಾದವರು ತಿಳಿಸುತ್ತಿದ್ದಾರೆ ಮತ್ತು ಅವರು ವಾಪಸಾದರೆ ಅವರಿಗೆ ಸಹಾಯವಾಗುವದೆಂಬ ನಂಬಿಕೆ ಇದೆ. ಅಲ್ಲಿಯ ಪರಿಸ್ಥಿತಿ ಲಾಮಾರು ವಾಪಸಾದರೆ ಸರಿ ಹೋಗುವದೇ ಎಂಬ ಪ್ರಶ್ನೆಗೆ ಸ್ವಂತಕ್ಕಾಗಿ ಆಶ್ರಯ ಕೊಡಲು ನಿರಾಕರಿಸಿದರು

ಉದ್ಘಾಟನೆ

ಮೈಸೂರು ವಸ್ತುಪ್ರದರ್ಶನ ಕಟ್ಟಡದಲ್ಲಿ ಈ ದಿನ ಬೆಳಿಗ್ಗೆ ಮುಖ್ಯ ಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ವ್ಯವಸಾಯ ಪ್ರದರ್ಶನವನ್ನು ಪ್ರಾರಂಭಿಸಿದರು ಭಾರತ ಸರ್ಕಾರದ ಆಹಾರ ಮತ್ತು ವ್ಯವಸಾಯ ಮಂತ್ರಿ ಶ್ರೀ ಎ ಪಿ ಜೈನ್ರು ಅಖಿಲ ಭಾರತ ರೈತರ ಸಮಿತಿ ಪ್ರಾರಂಭಿಸಿದರು. ಮೈಸೂರು ಗವರ್ನರರಾದ ಶ್ರೀ ಮಂಗಳದಾಸ ಪಕ್ರಾಸರವರು ರೈತರುಗಳ 5 ನೇ ರಾಷ್ಟ್ರೀಯ ಸಮ್ಮೇಳನ ಆರಂಭಿಸಿದರು.

ಗೋವಧೆ ಹೆಚ್ಚಿದೆ

ಮೊನ್ನೆ ಶ್ರೀ ಡಿ ಎಸ್ ಕೆಂಗೇಗೌಡರ ಅಧ್ಯಕ್ಷತೆಯಲ್ಲಿ ನೇರಿದ್ದ ಮೈಸೂರು ಪ್ರಾಂತಸಭಾಧಿವೇಶನದಲ್ಲಿ ಡಾ|| ಬಿ ಬಿ ದಾಸರು ಮಾತನಾಡುತ್ತಾ, ನಗರದಲ್ಲಿ ಆಹಾರ ಧಾನ್ಯ ಬೆಲೆ ಏರಿದೆ, ಗೋವಧೆ ಹೆಚ್ಚುತ್ತಿದೆ ಎಂದರು.

ಸುದ್ದಿಗಳು

ನವ ದೆಹಲಿ 1 — ಸಾಮೂಹಿಕ ಅಭಿವೃದ್ಧಿ ಬಗ್ಗೆ ರಾಷ್ಟ್ರೀಯ ಸಮ್ಮೇಳನ ಮೈಸೂರಿನಲ್ಲಿ ಜುಲೈ ತಿಂಗಳು 23 ನೇ ತಾ|| ನಿಂದ 29 ನೇ ತಾ|| ವರಿಗೆ ನಡೆಯುವುದು. ಸಮ್ಮೇಳನದ ಅಧ್ಯಕ್ಷತೆಯನ್ನು ಯೋಜನಾ ಸಮಿತಿಯ ಉಪಾಧ್ಯಕ್ಷ ಶ್ರೀ ವಿ. ಟಿ ಕೃಷ್ಣಮಾಚಾರಿ ವಹಿಸುವರು.

ನವ ದೆಹಲಿ 1 — ಅಧಿಕೃತ ವೃತ್ತಗಳ ಪ್ರಕಾರ ಟಿಬೆಟ್ಟಿನಿಂದ ಭಾರತ ಪ್ರದೇಶಕ್ಕೆ ಬಂದಿರುವ ನಿರಾಶ್ರಿತರ ಸಂಖ್ಯೆ 7 ಸಾವಿರ ಲಾಸಾದಲ್ಲಿ ಈಗ ಶಾಂತಿ ನೆಲೆಸಿದೆ.

ಅಥೆನ್ಸ್ 1 — ಗ್ರೀಸಿನ ದೊರೆ ಪಾಲ್ ಸಹೋದರ ರಾಜಕುಮಾರ ಫೀಟರು ಗ್ರೀಸಿನ ವಿದೇಶ ಮಂತ್ರಿಶಾಖೆಗೆ ಸೂಚನೆಯನ್ನಿತ್ತು. ಅನಪೇಕ್ಷಿತ ಚಟುವಟಿಕೆಗಳ ಕಾರಣ ತಮ್ಮನ್ನು ಹೊರಕಳಿಸಲಾಯಿತೆಂದು ಪಂ|| ನೆಹರು ನುಡಿದಿರುವ ಬಗ್ಗೆ ಸಂಯಾಗಿ ತಿಳಿದುಕೊಳ್ಳಬೇಕೆಂದು ತಿಳಿಸಿದ್ದಾರೆ

ಶಾಲಾ ಕಾಲೇಜುಗಳಲ್ಲಿ ನೈತಿಕ ಹಾಗೂ ಧಾರ್ಮಿಕ ಶಿಕ್ಷಣ ನೀಡುವ ಪ್ರಶ್ನೆಯನ್ನು ಕುರಿತು ಈ ವರ್ಷ ಜನವರಿ ತಿಂಗಳಲ್ಲಿ ಮದರಾಸಿನಲ್ಲಿ ನಡೆದ ಕೇಂದ್ರ ಶಿಕ್ಷಣ ಸಲಹಾ ಮಂಡಲಿಯು ಸಭೆಯಲ್ಲಿ ಚರ್ಚಿಸಲಾಯಿತು

ಪಾಟ್ನಾ 1 — ಕಾಂಗ್ರೆಸು ಜನರ ಸಭೆಯಲ್ಲಿ ಪಂ|| ನೆಹರು ಭಾಷಣಮಾಡುತ್ತಾ, ತಮಗೆ ಉಪಾಧ್ಯಾಯರು ಪದ್ಧತಿ ಬರುತ್ತಿದೆ ಎಂದರು

ತಾಳೆಯ ಸಂಚಾಂಗ
ಆ|| ಮಹಾವಿದ್ವಾ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ
3 ಏಕಾದತಿ ಪೂರ್ವಾಭಾದ್ರ

ವಿವಿಧ ವರ್ತಮಾನ

ಬೆಂಗಳೂರು— ಇನ್ನು 4 ವರ್ಷಗಳಲ್ಲಿ ಸಂಸ್ಥಾನಾದ್ಯಂತ ಪಾನನಿರೋಧ ಶಾಸನ ಜಾರಿಮಾಡಲಾಗುವುದೆಂದು ಶಾಸನಸಭೆಯಲ್ಲಿ ತಿಳಿಸಲಾಯಿತು.

ನವದೆಹಲಿ 30— ಈ ವರ್ಷ ಏನಾದರು ಹಿಂದೂ ವಿಶ್ವವಿದ್ಯಾನಿಲಯದ ವಾರ್ಷಿಕ ಪರೀಕ್ಷೋತ್ಸವವು ನಡೆಯುವುದಿಲ್ಲವೆಂಬ ಅಂಶವು ನಿಜವೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

ನವದೆಹಲಿ 1— ದೆಹಲಿಯಲ್ಲಿ ಇಬ್ಬರು ವರ್ತಕರಿಗೆ ಅವರು ವಾಣಿಜ್ಯ ಸಂಸ್ಥೆಯೊಂದಕ್ಕೆ ಆಮದಾತ ಲೈಸೆನ್ಸನ್ನು ಮಾರಿದ್ದಕ್ಕಾಗಿ ಒಂದು ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಲಾಗಿದೆ.

ನವದೆಹಲಿ 30— ಭಾರತ ಸರ್ಕಾರದ ಎಲ್ಲಾ ಮಂತ್ರಿವಲಯಗಳಲ್ಲೂ ಕಾಗದ ಮತ್ತು ಸ್ಟೇಷನರಿ ಉಪಯೋಗದಲ್ಲಿ ಶೇಕಡ 15 ರಷ್ಟು ಪೋ ತಾ ಮಾಡಲಾಗಿರುವುದಾಗಿ ಲೋಕಸಭೆಯಲ್ಲಿ ತಿಳಿಸಲಾಯಿತು.

ನವದೆಹಲಿ 30— ಲೋಕಸಭೆಯ ಅಂದಾಜಾ ಸಮಿತಿಯು ತನ್ನ 60 ನೇ ವರದಿಯಲ್ಲಿ, ಸರ್ಕಾರದ ಆರ್ಥಿಕ ಸಂವತ್ಸರವನ್ನು ಏಪ್ರಿಲ್ಲಿ 1 ರಿಂದ ಅಕ್ಟೋಬರು 1ಕ್ಕೆ ಒದಲಾಯಿಸಲು ಮತ್ತೊಸಲಹೆಮಾಡಿದೆ.

ಕೊಟ್ಟಾಯಂ 30— ಕೇರಳ ಸರಕಾರದವರು ಕೇರಳ ವಿದ್ಯಾಭ್ಯಾಸ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳದಿದ್ದರೆ ತಮ್ಮ ಶಾಲೆಗಳನ್ನು ತೆಗೆಯುವುದಿಲ್ಲವೆಂದು ದಕ್ಷಿಣ ಭಾರತ ಚರ್ಚ್ ಸಮಿತಿ ನಿರ್ಧರಿಸಿದೆ.

ಬೆಂಗಳೂರು— ಮೈಸೂರು ರಾಜ್ಯದಲ್ಲಿ ತಯಾರಿಸಿರುವ ಸಿಟ್ಟಿಯಂತೆ 165 ಹಿಂದುಳಿದ ಜನಾಂಗವಿರುವುದೆಂದು ಸಮಾಜಕಲ್ಯಾಣ ಮಂತ್ರಿ ಮೊನ್ನೆ ಶಾಸನಸಭೆಯಲ್ಲಿ ತಿಳಿಸಿದರು

ಕೊಲಂಬೊ 30— ಭಾರತ ಮೂಲತ್ವದ 7 ಲಕ್ಷ ಪ್ರಜೆಗಳ ಸಮಸ್ಯೆಬಗ್ಗೆ ಸಿಲೋನು ಭಾರತದೊಂದಿಗೆ ಮಾತುಕತೆ ನಡೆಸಲಿರುವುದಾಗಿ ಪ್ರಕಟವಾಗಿದೆ.

ರೊಡೇಷಿಲೆಂಡ್— ಅಮೇರಿಕಾದ 1960 ರ ಜನಗಣತಿಯಲ್ಲಿ ಅಮೇರಿಕಾದ ಜನಸಂಖ್ಯೆ 180 ದಶಲಕ್ಷವನ್ನು ಮುಟ್ಟಲಿಧೆಯೆಂಬುದಾಗಿ ಅಮೇರಿಕಾ ಸರಕಾರದ ಅಧಿಕಾರಿಯೊಬ್ಬರು ಇಲ್ಲಿ ಭವಿಷ್ಯ ನುಡಿದಿದ್ದಾರೆ.

ಭಾರತದಲ್ಲೇ ಅತ್ಯಂತ ಉದ್ದವಾದ ಸೇತುವೆ ಇರುವುದು ಸೋಣ ನದಿಗೆ ಅಡ್ಡಲಾಗಿ ಎಂದೂ ಇದು ಉದ್ದ 9300 ಅಡಿಯೆಂದೂ ಪ್ರಕಟವಾಗಿದೆ.

Our Bangalore Sales Depot address—
71/4 Arcot Sreenivasachar St., Bangalore 2.

ಗೋಂಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ



ಅಪೆರಾ— 26-4-59 ರಿಂದ

ಇಬ್ಬರು ಸಹೋದರಿಯರು ತಮಿಳು

ಪಾತ್ರ— ಜಮಿನಿ ಗಣೇಶ್, ಸಾವಿತ್ರಿ, ಸಂಬಯ್ಯರ್, ಗಿರಿಜಾ, ದೊರೈರಾಜ್

ಪ್ರತಿದಿನ 3 ಆಟಗಳು

ವುಡ್‌ಲಾಂಡ್

Crowded 5th Week

ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡ ಬೇಕೆನ್ನಿಸುವ ಚಿತ್ರ

ಅನಾಡಿ

(ಹಿಂದಿ)

ತಾರಾಗಣ— ನೂತನ್, ರಾಜ್ ಕಪೂರ್ ಮೋತೀಲಾಲ್, ಶುಭಾ ಖೋಟೆ

SHAKTI SUDHA

A Superb Tonic

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ

ಆ ಶೋ ಕಾ ಫಾರ್ಮಸಿ

ಅಶ್ವಿನ್ಸ್‌ಡಾಕ್ ಬಜಾರ್ ಮೈಸೂರು

For Quality Printing

L. N. Press

Sivarampet, Mysore

Edited, Printed & Published by Dharma Prachara Nirata M. Krishna Rao, at the Satyavadi Press Chamarajapuram, Mysore